## ಅಂಗೈಯಲ್ಲಿ ಅರಮನೆ

### ಇನ್ನು ಮುಂದೆ ಮಾಡೋದಿಲ್ಲ

ನನ್ನಿಂದ ಏನಾದರೂ ತಪ್ಪು ನಡೆದರೆ, 'ತಪ್ಪಾಯ್ತು, ಕ್ಷಮಿಸಿ. ಮುಂದಿನ ಬಾರಿ ಇನ್ನೂ ಚೆನ್ನಾಗಿ ಮಾಡ್ತೀನಿ' ಎಂದು ಹೇಳಿ ಬೈಗುಳಗಳಿಂದ ತಪ್ಪಿಸಿಕೊಂಡು ಬಿಡುತ್ತಿದ್ದೆ. ಒಂದು ದಿನ ಆಸ್ಪತ್ರೆಯಲ್ಲಿದ್ದ ನನ್ನ ಅಜ್ಜ ತೀರಿಕೊಂಡಾಗ ಅಪ್ಪ ಎಲ್ಲವನ್ನೂ ತಿಳಿಸಿ, ಕೆಲವು ಸೂಚನೆಗಳನ್ನು ಕೊಟ್ಟು, ಚಾಪೆ ಹಾಸಿ ಇಡುವಂತೆ ತಿಳಿಸಿದರು. ನಾನು ಚಾಪೆ ಹಾಸಿ, ಎಂದಿನಂತೆ ಅದರ ಮೇಲೆ ತಲೆದಿಂಬನ್ನೂ ಇಟ್ಟು ತಯಾರಿ ಮಾಡಿದ್ದೆ. ಮನೆಗೆ ಬಂದ ಮೇಲೆ ಅದನ್ನು ನೋಡಿದ ಅಪ್ಪ ಕೋಪಗೊಂಡಾಗ ನನಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. 'ಸಾರಿ, ಮುಂದಿನ ಸಲ ಹೀಗೆ ಮಾಡಲ್ಲ... ಇನ್ನೊಮ್ಮೆ ತೀರಿಕೊಂಡಾಗ ದಿಂಬು ಎಲ್ಲಾ ಇಡಲ್ಲ...' ಎಂದೆ. ಅಪ್ಪ ಉರಿವ ಕಣ್ಣಿನಿಂದ ನೋಡಿದಾಗಲೇ ನಾನು ಹಾಗೆಲ್ಲಾ ಹೇಳಬಾರದಿತ್ತು ಅನಿಸಿದ್ದು.

**ವೇದಾ ವಾತ್ಸಲ್ಯ, ಹುಬ್ಬಳ್ಳಿ**



### ಮೂತ್ರೀ ಮನೆ

ಮುಸ್ಸಂಜೆ ಸಮಯ. ಅಜ್ಜ, ಅಜ್ಜಿ ತಮ್ಮ ಎರಡು ವರ್ಷದ ಮೊಮ್ಮೊಗನೊಂದಿಗೆ ಮನೆಯ ಜಗುಲಿ ಮೇಲೆ ಕುಳಿತಿದ್ದರು. ಆಗ ಪಕ್ಕದ ಮನೆಯಲ್ಲಿದ್ದ ಮತ್ತೊಂದು ಅಜ್ಜಿ, ಈ ಅಜ್ಜಿಯನ್ನು ಕರೆದರು. ಮೊಮ್ಮಗನಿಗೆ, 'ಪುಟ್ಟಾ, ಇಲ್ಲೇ ಅಜ್ಜನ ಜೊತೆ ಆಡ್ತಿರು. ಐದು ನಿಮಿಷದಲ್ಲಿ ಬಂದ್ಬಿಡ್ತೀನಿ' ಎಂದು ಹೇಳಿ ಅಜ್ಜಿ ಎದ್ದು ಹೋದವರು. ಐದಾರು ನಿಮಿಷದೊಳಗೆ ವಾಪಸ್ ಆದರು. ಆಗ ಜಗುಲಿ ಮೇಲೆ ಮೊಮ್ಮಗ ಒಬ್ಬನೇ ಇದ್ದ. ಅಜ್ಜಾ ಎಲ್ಲೆಂದು ಹೇಳಿದಾಗ, ಆತ, 'ಮೂತ್ರೀ ಮನೆಗೆ' ಎಂದು ಹೇಳಿದ. ತುಂಬಾ ಹೊತ್ತಾದರೂ ಅಜ್ಜ ಬರಲಿಲ್ಲ. ಅಜ್ಜಿ, ಮನೆ ಒಳಗಿನ ಮೂತ್ರೀಮನೆ(ಟಾಯ್ಲೆಟ್) ಬಳಿ ಬಂದು ಎರಡು ಮೂರು ಬಾರಿ ಕೂಗಿದರೂ ಒಳಗಡೆಯಿಂದ ಉತ್ತರ ಬರಲಿಲ್ಲ. ಅಜ್ಜಿ ಪೆಚ್ಚಾಗಿ ಮನೆಯ ಬಾಕಿ ಕೋಣೆಯತ್ತ ನೋಡಲು ಮುಂದಾದಾಗ ಹೊರಗಡೆ ಗೇಟು ತೆರೆದುಕೊಂಡು ಬರುತ್ತಿದ್ದ ಅಜ್ಜನನ್ನು ಕಂಡು, 'ಎಲ್ಲಿ ಹೋಗಿದ್ರೀ?' ಎಂದು ಕೇಳಿದರು. ಅಜ್ಜ,'ಮೂರ್ತಿ ಮನೆಗೆ ಹೋಗಿದ್ದೆ' ಎಂದರು.



**ಅರವಿಂದ ಜಿ.ಜೋಷಿ**